2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 88/2022</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ನಾಸಿರ್ | ಪಿಡಬ್ಲೂ - 08 |
| ತಂದೆಯ ಹೆಸರು | - | ಹಸನ್ | ಸಿಡಬ್ಲೂ - 09 |
| ವಯಸ್ಸು | - | 30 ವರ್ಷ | |
| ಉದ್ಯೋಗ | - | ಪೈಂಟಿಂಗ್ ಕೆಲಸ | |
| ವಾಸ ಸ್ಥಳ | - | ಮಾರ್ಕೆಟ್ ರಸ್ತೆ, ಚಿಕ್ಕಮಗಳೂರು | |

ದಿನಾಂಕಃ **04.03.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ಚಾಸಾ.8 ನನ್ನ ಸ್ನೇಹಿತ.
2. ಈಗ ತೋರಿಸಿದ ನೋಟೀಸು ಮತ್ತು ಮಹಜರಿನಲ್ಲಿ ನನ್ನ ಸಹಿ ಇದೆ. ನೋಟೀಸನ್ನು ನಿಪಿ.29 ಎಂದು ಮಹಜರನ್ನು ನಿಪಿ.30 ಎಂದು ಸಾಕ್ಷಿಯ ಸಹಿಯನ್ನು ನಿಪಿ.29(ಎ) ಮತ್ತು 30(ಎ) ಎಂದು ಗುರುತಿಸಲಾಯಿತು.
3. ಕಳೆದ ಎರಡು ವರ್ಷಗಳ ಹಿಂದೆ ನಿಪಿ.29 ಮತ್ತು 30 ಕ್ಕೆ ಚಿಕ್ಕಮಗಳೂರು ಸಿಇಎನ್ ಪೋಲೀಸ್ ಠಾಣೆಯಲ್ಲಿ ನಾನು ಮತ್ತು ಚಾಸ.8 ಸಹಿ ಮಾಡಿದ್ದೇವೆ. ಆ ಸಮಯದಲ್ಲಿ ಪೋಲೀಸರು ಸಂಗ್ರಹಿಸಿದ ಭಾವಚಿತ್ರ ಈಗ ನಿಪಿ.31 ಮತ್ತು 32 ಎಂದು ಗುರುತಿಸಲಾಯಿತು.
4. ನಿಪಿ.31 ರಲ್ಲಿ ಕಾಣುವ ಎರಡು ಮೊಬೈಲುಗಳನ್ನು ಪೋಲೀಸರು ಅಮಾನತುಪಡಿಸಿಕೊಂಡರು. ಒಂದು ವಿವೋ ಹಾಗೂ ಇನ್ನೊಂದು ರೆಡ್-ಮಿ ಕಂಪನಿಯ ಮೊಬೈಲುಗಳಾಗಿವೆ.

<u>ಪಾಟೀ ಸವಾಲು: ಶ್ರೀ ಪಿ.ಇ.ಎಸ್., ವಕೀಲರಿಂದ ಆರೋಪಿ ಪರವಾಗಿಃ</u>

5. ನಮ್ಮ ಮನೆ ಸಿಇಎನ್ ಪೋಲೀಸ್ ಠಾಣೆಯಿಂದ ಮೂರು ಕಿಮೀ ದೂರ ಇದೆ. ನನ್ನ ವಿರುದ್ಧ ಯಾವುದೇ ಕ್ರಿಮಿನಲ್ ಪ್ರಕರಣಗಳು ಇವೆ. ಪೋಲೀಸರ ಪರಿಚಯ ನನಗೆ ಇರುವುದರಿಂದ ನನಗೆ ಕರೆ ಮಾಡಿ ಕರೆದಿದ್ದರು. ಪೋಲೀಸರ ಮೇಲಿನ ವಿಶ್ವಾಸದಿಂದ ನಾನು ನಿಪಿ.29 ಮತ್ತು 30 ರ ದಾಖಲೆಗೆ ಸಹಿ ಮಾಡಿದ್ದೇನೆ. ನಿಪಿ.29 ಮತ್ತು 30 ರಲ್ಲಿ ಬರೆದ ವಿಚಾರ ಗೊತ್ತಿಲ್ಲ. ನಾನು ಹೇಳಿ ಬರವಣಿಗೆ ಮಾಡಿಸಿರುವುದಿಲ್ಲ. ಪೋಲೀಸರ ಕೋರಿಕೆಯಂತೆನಾನು ಭಾವಚಿತ್ರ ತೆಗೆಯುವಾಗ ನಿಂತಿದ್ದೇನೆ. ಬೇರೆ ಮಾಹಿತಿ ನನಗಿಲ್ಲ. ನನ್ನ ಸಮಕ್ಷಮ ಮಹಜರು ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

Sd/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ